

# ಧರ್ಮ - ಕನ್ನಡಿಗರ ಮನೋಧರ್ಮ

**ಪ್ರೊ. ಕೆ.ಬಿ. ಪ್ರಭುಪ್ರಸಾದ್**

ಐತಿಹಾಸಿಕವಾಗಿ ತಿಳಿದುಬರುವಂತೆ ಕನ್ನಡನಾಡಿನ ಜನತೆ ಧಾರ್ಮಿಕರು, ಸುಸಂಸ್ಕೃತರು. ಸುದೀರ್ಘ ಕಾಲದಿಂದ ಬೆಳೆದು ಬಂದಿರುವ ಈ ಪರಂಪರೆ ಇಂದಿಗೂ ನಮ್ಮ ಜನರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಈ ಧಾರ್ಮಿಕ ಪರಂಪರೆಯ ವೈಶಿಷ್ಟ್ಯವನ್ನು ಕುರಿತು ಬರೆದಿರುವ ಲೇಖಕರು ನಿವೃತ್ತ ಆಂಗ್ಲ ಪ್ರಾಧ್ಯಾಪಕರು. ಉತ್ತಮ ವಿದ್ವಾಂಸರೂ, ಲೇಖಕರೂ, ಗೀತರಚನಕಾರರೂ ಆಗಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

**ಸೂ**ರ್ಯಾಸ್ತದ ವರ್ಣವೈಭವವೆಲ್ಲ ಕರಗಿ ನೀಲಮಿಶ್ರಿತ ಬೆಳಗಲ್ಲಿ ಲೀನವಾಗುತ್ತಿರುವ ಸಮಯ. ಸಂಧ್ಯೆಯ ಪ್ರಶಾಂತ ವಾತಾವರಣದಲ್ಲಿ ಶ್ರೀರಾಮಕೃಷ್ಣಾಶ್ರಮದ ಆವರಣದಿಂದ ಬಾಲಕರ ಸಾಮೂಹಿಕ ಪ್ರಾರ್ಥನೆ ಕೇಳಿಬರುತ್ತಿತ್ತು:

**ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ**
**ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ॥**
**ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ**
**ಸೋಽಯಂ ವೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ಹರಿಃ ॥**

ಸರ್ವಧರ್ಮ ಸಮನ್ವಯಾಚಾರ್ಯ ಶ್ರೀರಾಮಕೃಷ್ಣ ಪರಮಹಂಸರ ಮಂದಿರದಲ್ಲಿ ಹಾಡಲು ತಕ್ಕ ಪ್ರಾರ್ಥನೆ ಇದು. ಒಂದು ವಿಶೇಷವೆಂದರೆ ಇದರಲ್ಲಿ ಬರುವ ಸರ್ವಧರ್ಮಸಮನ್ವಯದ ಕಲ್ಪನೆ ಕನ್ನಡಿಗರದು. ಹೊಯ್ಸಳ ರಾಜ ವಿಷ್ಣುವರ್ಧನನ ಕಾಲದ ಬೇಲೂರಿನ ಶಾಸನವೊಂದರಲ್ಲಿ ಕೆತ್ತಿದ ಶ್ಲೋಕ ಇದು. ಇದರ ಕವಿ ವೈಷ್ಣವನಾದುದರಿಂದ ಆತ ತ್ರೈಲೋಕ್ಯನಾಥನನ್ನು ಹರಿ ಎಂದು ಕರೆದಿದ್ದಾನೆ. ಶೈವರಿಗೆ ಶಿವ. ಅವರವರಿಗೆ ಅವರವರ ಇಷ್ಟದೈವ. ಈ ಪ್ರಾರ್ಥನೆ ಹೊಮ್ಮಿದ ಹೃದಯದಲ್ಲಿ ವೈಷ್ಣವ ಧರ್ಮನಿಷ್ಠೆ ಇರುವುದರ ಜೊತೆಗೆ ಇತರ ಧರ್ಮಗಳ ಬಗೆಗೂ ಮನ್ನಣೆ ಇದೆ. 'ದೇವನೊಬ್ಬ ನಾಮ ಹಲವು' ಎಂಬ ತಿಳಿವಳಿಕೆ ಇರುವವರಲ್ಲಿ ಈ ಬಗೆಯ ವೈಶಾಲ್ಯ ಸಹಜ.

೧೨ನೇ ಶತಕದ ಕೈದಾಳ ಶಾಸನದಲ್ಲಿ ಮೂರುಗರೆ ನಾಡಿನ ದೊರೆ ಗೂಳಿ ಬಾಚಿದೇವ, ಜೈನ-ಬೌದ್ಧ-ಶೈವ-ವೈಷ್ಣವ-ನಾಲ್ಕು ಧರ್ಮದವರಿಗೂ ಅವರವರ ದೇವಾಲಯಗಳನ್ನು ಕಟ್ಟಿಸಿ, ದಾನವಿತ್ತು, ಚತುಸ್ಸಮಯ ಧರ್ಮೋದ್ಧಾರ ಧೌರೇಯನೆಂದು ಗೌರವಿಸಲ್ಪಟ್ಟಿದ್ದಾನೆ.

ಕೆಲವು ವರ್ಷಗಳ ಹಿಂದೆ ಒಂದು ಪ್ರಸಂಗ ನಡೆಯಿತು. ಅಂಗಡಿಯಿಂದ ೨೫ ಕೆ.ಜಿ. ಅಕ್ಕಿಯನ್ನು ಕೊಂಡು ಮನೆಗೆ ಒಯ್ಯಲು ಕೂಲಿಯವನೊಬ್ಬನನ್ನು ಕರೆದು, ''ಏನು ಕೊಡಬೇಕಪ್ಪಾ ಸರಸ್ವತಿಪುರದ ಮನೆಗೆ ಹೊತ್ತು ಸಾಗಿಸಲು?'' ಎಂದು ಕೇಳಿದೆ. ಅವನಾಗಲೆ ಮೂಟೆ ಹೊತ್ತಾಗಿತ್ತು. ''ಮೊದಲೆ ಹೇಳಿ

ಬಿಡಪ್ಪಾ. ಆಮೇಲೆ ಜಗಳ ಬೇಡ'' ಎಂದೆ. ಅವ ಚಕಿತನಾಗಿ, ''ಜಗಳಾ! ಜಗಳ ಯಾರಾಡ್ತಾರೆ ಬುದ್ದೀ — ಬನ್ನಿ ಬನ್ನಿ — ಮಾಮೂಲು ಅದೇನು ಕೊಡ್ತೀರೊ ಕೊಡಿ,'' ಅಂತ ಹೇಳುತ್ತಾ ನಡೆದೇಬಿಟ್ಟ. ಅವನ ಮೈಮೇಲೆ ಒಂದು ಕೊಳಕು ಚಡ್ಡಿ ಬಿಟ್ಟರೆ ಒಂದು ತುಂಡು ಬಟ್ಟೆಯೂ ಇರಲಿಲ್ಲ. ಮುಖ, ಮೈ, ತಲೆ ಬೆವರು, ಧೂಳುಗಳಿಂದ ತುಂಬಿತ್ತು. ಆದರೆ ಅವನ ಉತ್ಸಾಹ-ಪ್ರಸನ್ನತೆಗಳನ್ನು ನೋಡಿ ಸಂತೋಷವಾಯಿತು. ದಾರಿಯಲ್ಲಿ ನಡೆಯುತ್ತಾ ನಮ್ಮ ಮಾತುಕತೆ ಶುರುವಾಯಿತು. ''ದಿನಾ ಎಷ್ಟು ಬರುತ್ತಯ್ಯಾ ಕೂಲಿ?'' ಎಂದು ಕೇಳಿದೆ. ಆತ ಇಷ್ಟು ಎಂದು ಹೇಳದೆ, ''ಬರ್‍ತದೆ ಬುದ್ದೀ ನಮ್ಮ ಜೀವ್ನಕ್ಕೆ ಸಾಕಾಗೋಷ್ಟು. ಅಲ್ದೆ ಎಷ್ಟ್ ಬಂದ್ರೆ ತಾನೆ ತ್ರುಪ್ತಿ ಇರ್‍ತಾದಾ,'' ಅಂದ. ಒಳ್ಳೆ ವೇದಾಂತೀನೆ ಸಿಕ್ಕನಲ್ಲ ಅಂತ ಮನಸ್ಸಿನಲ್ಲಿ ಅಂದುಕೊಂಡು ಅವನ ಸಂಸಾರದ ಬಗ್ಗೆ ಕೇಳಿದೆ. ಹಳ್ಳಿಯಲ್ಲಿರೊ ಹೆಂಡತಿ-ಮಕ್ಕಳಿಗೆ ವಾರ ವಾರವೂ ಒಂದಷ್ಟು ಹಣ ಕಳಿಸುತ್ತ ತಾನು ಪೇಟೆ ಅಂಗಡಿ ಜಗುಲಿಯ ಮೇಲೆ ಮಲಗೋದು, ಬೀದಿ ಬದಿಯಲ್ಲಿ ಮಾಡೊ ಇಡ್ಲಿ ಮುಂತಾದ್ದು ತಿಂದು ಹೇಗೋ ಇರೋದು. ಒಟ್ಟಿನಲ್ಲಿ ನೆಮ್ಮದಿಯಿಂದ ಇದ್ದಾನೆ ಎಂದು ಅರ್ಥವಾಯಿತು. ಆದರೆ ಅದು ಹಣದ ಗಳಿಕೆಯಿಂದ ಬಂದ ನೆಮ್ಮದಿಯಲ್ಲ. ಅವನ ಮನೋಧರ್ಮದಿಂದ ಉಂಟಾದುದು ಎಂದು, ಅವನು ಕೊಟ್ಟ ಒಂದು ಆಶ್ಚರ್ಯಕರವಾದ ಸಾದೃಶ್ಯದಿಂದ ತಿಳಿಯಿತು ಅವನು ಹೇಳಿದ: ''ಎಂಗೋ ನಡೀತದೆ ಬುದ್ದೀ. ಶಿವ ನಡಿಸ್ತಾನೆ. ಈ ಜೀವ್ನಾ ಏನ್ ಸಾಸ್ವತವಾ. ಇಂಗೇ ದುಡಿತಿರೋದು. ಶಿವ ಕರ್‍ದಾ ಅಂದ್ರೆ ಈ ಅಕ್ಕಿಮೂಟೆ ಬಿಸಾಕ್ದಂಗೆ ಬಿಸಾಕಿ ನಡೀತಿರಾದು, ಅಲ್ವಾ ಬುದ್ದೀ? ನಾನು ಏನೂ ತಿಳೀದ ಮುಕ್ಕ! ನಾ ಒಂದು ಮಾತ ಏಳಿದ್ರೆ ಕ್ಸಾಪಾ ಮಾಡ್ಕಾಬ್ಯಾಡಿ. ಸಮುದ್ರಾದಾಗೆಷ್ಟು ನೀರು ಇದ್ರೆ ನಮಗೇನು, ನನ್ನೊಡೆಯಾ. ನೀರ್‍ಗೆ ಅಂತ ಓದಿ ಅನ್ನಿ. ನಾ ಎಷ್ಟ ನೀರ ತಂದೇನು? ನನ್ ಬಗಸೆ ಇರಾಷ್ಟೆ ಅಲ್ಲವ್ರಾ. ಇಂಗಿರೋವಾಗ ಸುಮ್ನೆ ಒದ್ದಾಡ್ತೀವಿ. ಏನಾ ಬುದ್ದೀ ನಾ ಏಳಾದು ತೆಪ್ಪಾ?'' ಕೇಳುತಾ ನಾನು ನಿಬ್ಬೆರಗಾದೆ. ಮನೆಯೊಳಗೆ ಮೂಟೆ ತಂದಿಟ್ಟ ಅವನಿಗೆ ನಾನೇ ಹೇಳಿದುದಕ್ಕಿಂತಾ ಒಂದು ರೂಪಾಯಿ ಹೆಚ್ಚು ಕೊಟ್ಟೆ. ಕಡಿಮೆ ಆಯಿತು-ಹೆಚ್ಚಾಯಿತು-ಎಂಬ ಒಂದೂ ಭಾವವಿಲ್ಲದೆ ಆತ ನಗುತ್ತಾ ಕೂಲಿ ಇಸಗೊಂಡು, ''ಬರ್ತಿನಿ ಬುದ್ದೀ'' ಎನ್ನುತ್ತಾ ಹೊರಟು ಹೋದ. ಹಿಗ್ಗಲಿಲ್ಲ, ಕುಗ್ಗಲಿಲ್ಲ. ಕಡುಬಡವ, ಅನಿಶ್ಚಿತವಾಗಿ ಬರುವ ದಿನಗೂಲಿಯಿಂದ ಜೀವನ ನಡೆಸುವವ, ಅವಿದ್ಯಾವಂತ, ಅನಕ್ಷರಸ್ಥ. ತೀರಾ ತೀರಾ ಸಾಮಾನ್ಯ ಮನುಷ್ಯನ ಮಾತು, ಮನಗಳಲ್ಲಿ ಅದೆಂಥಾ ಜೀವನ ತತ್ತ್ವ! ಈ ತಿಳಿವಳಿಕೆ ಹೇಗೆ ಬಂತು! ನಮ್ಮ ಜನರ ಮನದಾಳದಲ್ಲಿ ಕಾಣುವ ಸಂಸ್ಕೃತಿಯ ಈ ಬೇರು ಪರಂಪರಾಗತವಾಗಿದೆ. ಬಡ ಕೂಲಿಕಾರ. ಬಡವರು ಸದಾ ಬಡವರಾಗೇ ಇರಬೇಕೆಂದು ಅರ್ಥವಲ್ಲ. ಅವರು ವಿದ್ಯಾವಂತರಾಗಿ, ಸಾಕಷ್ಟು ಸ್ಥಿತಿವಂತರಾಗಿ, ಉತ್ತಮ ಬದುಕನ್ನು ಕಾಣಬೇಕು, ನಿಜ. ಆದರೆ ಹೇಗೆ ಇದ್ದರೂ ಇಂಥಾ ಮನೋಧರ್ಮ ಇರುವುದು ದೊಡ್ಡದು.

'ಕನ್ನಡ ಶಾಸನ ಸಾಹಿತ್ಯ ಸಂಚಯ' ಎಂಬ ಪುಸ್ತಕದ ಪುಟಗಳನ್ನು ತಿರುವಿ ಹಾಕುತ್ತಿರುವಾಗ ಒಂದು ಶಾಸನಪದ್ಯ ನಮ್ಮ ಗಮನವನ್ನು ಸೆಳೆಯಿತು. ಕನ್ನಡಿಗರ ಮನೋಧರ್ಮವನ್ನು ಅದು ಹಿಡಿದಿಟ್ಟಂತೆ ಕಂಡಿತು. 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು, ಸೆರೆಯೊಳ್ ಸಿಲುಕಿದ (ನಿರಪರಾಧಿಗಳೂ ನಿಸ್ಸಹಾಯಕರೂ ಆದ) ಅನಾಥರಂ ಬಿಡಿಸು, ಮಿತ್ರರಿಗೆ ಇಂಬುಕೆಯ್, ನಂಬಿದರ್ಗೆ ಎರೆವೆಟ್ಟಾಗಿರು, ಶಿಷ್ಯರಂ ಪೊರೆ', ಎಂದು ವಿಜಯನಗರದ ಪ್ರೌಢ ಪ್ರತಾಪ ದೇವರಾಯನ ಮಂತ್ರಿ ಲಕ್ಷ್ಮೀಧರ ಕೂಸಾಗಿದ್ದಾಗ ಆತನ ತಾಯಿ ನಿತ್ಯ ಹಾಲು ಕುಡಿಸುವಾಗ ಒಳಲೆಯಿಂದ ಬಾಯೊಳಗೆ ಹಾಕುತ್ತಿದ್ದ ಒಂದೊಂದು ಗುಟುಕಿಗೂ, ಹೀಗೆ ಒಂದೊಂದು ಮಾತನ್ನು ಹೇಳುತ್ತ ಕೂಸಿನ ಕಿವಿಗೆ ಹಾಕುತ್ತಿದ್ದಳಂತೆ. ಇದು ಆ ಪದ್ಯ. ಮೈ ಪುಷ್ಟಿಗೆ ಹಾಲು, ಹೃದಯದ ಪುಷ್ಟಿಗೆ ಇಂಥ ಹಿತವಚನ! ತಾಯ ಇಂಥ ಹಾರೈಕೆಯಂತೆ ಕನ್ನಡದ ಮಕ್ಕಳು ಧರ್ಮಬುದ್ಧಿಯನ್ನು ಮೈಗೂಡಿಸಿಕೊಂಡು ಬೆಳೆಯುತ್ತಿದ್ದುವು ಎನ್ನುವುದಕ್ಕೆ ಇದೊಂದು ನಿದರ್ಶನ. ಕವಿಯ ಆಶಯ — ಮುಂದೆ ಸಮಸ್ತ ನಾಡಿನ ಅಮಾತ್ಯನಾಗುವವನಿಗೆ ಶೈಶವದಿಂದಲೇ ಇಂಥ ತರಬೇತಿ ಆವಶ್ಯಕ — ಎನ್ನುವುದು. ಹೀಗೆ ಶಿಶುವಾಗಿರುವಾಗಲೆ ಹಾಲಿನೊಡನೆ ರಕ್ತಗತವಾದ ತಾಯಿಯ ಸಂದೇಶದಿಂದ ಪುಷ್ಟಿಗೊಂಡು ಬೆಳೆದ ಕನ್ನಡನಾಡಿನ ಮಕ್ಕಳು ಕನ್ನಡ ಕುಲಕೆ ರನ್ನದ ಕನ್ನಡಿಯೆನೆ ವಿಶ್ವವಿದಿತ ವೃತ್ತಶ್ರೀ ಸಂಪನ್ನನಾಗಿ ಒಳಗೂ ಹೊರಗೂ ನಿರ್ಮಲನಾಗಿ ಬಾಳಿದ ಮಂತ್ರಿ ಲಕ್ಷ್ಮೀಧರನಂತೆ ಧರ್ಮವಂತರಾಗಿ ಬಾಳಿದ ನಿದರ್ಶನಗಳು ಹಲವಾರು.

ಈ ಮೂರೂ ಚಿತ್ರಗಳಲ್ಲಿ ಕನ್ನಡಿಗರ ಮನೋಧರ್ಮ ಸೊಗಸಾಗಿ ಅಭಿವ್ಯಕ್ತವಾಗಿದೆ. ದೈವಭಕ್ತಿ, ಧರ್ಮಶ್ರದ್ಧೆ ಮಾತ್ರವಲ್ಲದೆ, ಸರ್ವಧರ್ಮಸಮನ್ವಯ ದೃಷ್ಟಿ ಮೊದಲ ಶ್ಲೋಕ ಘೋಷದ ಚಿತ್ರದಲ್ಲಿ ಕಂಡರೆ, ತೃಪ್ತಿ-ಜೀವನೋಲ್ಲಾಸ ಇರುವ ಧರ್ಮಯುಕ್ತವಾದ ಮನೋಭಾವ ಎರಡನೆ ಚಿತ್ರದಲ್ಲಿ, ಎಲ್ಲ ಬಗೆಯಿಂದಲೂ ಪರೋಪಕಾರಕ್ಕಾಗಿಯೆ ಬಾಳನ್ನು ಸಂಪೂರ್ಣವಾಗಿ ಸವೆಸಬೇಕೆಂಬ ಸೇವಾಪೇಕ್ಷೆ ಮೂರನೆ ಚಿತ್ರದಲ್ಲೂ ಕಾಣುತ್ತೇವೆ. ಭಕ್ತಿಭಾವ, ಜೀವನಕಲೆ, ಸೇವಾಕಾಂಕ್ಷೆ – ಈ ಮೂರರಲ್ಲೂ ಕನ್ನಡಿಗರು ರಿಕ್ತರಲ್ಲ. ಇದು ಆರೋಗ್ಯಕರವಾದ ಮನೋಧರ್ಮ.

ಎಷ್ಟೇ ಆಗಲಿ ಪುಣ್ಯವತಿಯಾದ ಭಾರತ ಜನನಿಯ ತನುಜಾತೆಯಲ್ಲವೆ ಕರ್ನಾಟಕ ಮಾತೆ! ಭಾರತೀಯ ಹಲವಾರು ಮಕ್ಕಳಲ್ಲಿ ಹೆಚ್ಚಾಗಿ ತಾಯಿಯನ್ನೇ ಹೋಲುವ ಮಗಳೆಂದರೆ ಕನ್ನಡಾಂಬೆಯೆ, ಉಪನಿಷತ್ ದ್ರಷ್ಟಾರರು, ಶ್ರೀರಾಮ, ಶ್ರೀಕೃಷ್ಣ, ಶಂಕರ, ರಾಮಾನುಜ, ನಾನಕ, ಕಬೀರ, ಶ್ರೀಕೃಷ್ಣಚೈತನ್ಯ, ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ಶ್ರೀ ಅರವಿಂದ, ಶ್ರೀರಮಣಮಹರ್ಷಿ — ಹೀಗೆ ಎಲ್ಲ ಹಿರಿಯ ಚೇತನಗಳ ದಿವ್ಯ ಪ್ರಭಾವ ಭಾರತದ ಯಾವ ಭಾಗದಿಂದಲಾದರೂ ಬರಲಿ, ಕನ್ನಡಿಗರು ತೆರೆದ

ಹೃದಯದಿಂದ ಅದನ್ನು ಬರಮಾಡಿಕೊಳ್ಳುವುದು ಇಲ್ಲಿಯ ನೆಲದ ಗುಣ. ಅತ್ಯಂತ ಪ್ರಾಚೀನ ಕಾಲದಿಂದಲೂ ಇದು ದಿವ್ಯ ದಾರ್ಶನಿಕರ ತಪೋಭೂಮಿ. ಆಧ್ಯಾತ್ಮಿಕ ಸಾಧಕರ ಸಾಧನಾರಂಗ, ಅಲ್ಲದೆ ಮಧ್ವಾಚಾರ್ಯ, ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮೇಶ್ವರ, ವ್ಯಾಸರಾಯರು, ಪುರಂದರದಾಸ, ಕನಕದಾಸರು, ವಿದ್ಯಾರಣ್ಯರು ಹೀಗೆ ಹಲವಾರು ಯತಿವರೇಣ್ಯರು, ಶರಣರು, ಸಂತರು ಕಾಲಕಾಲಕ್ಕೆ ಇಲ್ಲಿಯೆ, ಈ ನೆಲದಲ್ಲೆ ಜನ್ಮತಾಳಿ ಧರ್ಮದ ಧ್ವಜವನ್ನು ಎತ್ತಿ ಮೆರೆದರು.

ಭಾರತದ ಧಾರ್ಮಿಕ ಪರಂಪರೆಯಲ್ಲಿ ಕನ್ನಡನಾಡಿನ ಕೊಡುಗೆ ವಿಶಿಷ್ಟವಾದುದು. ಎಂಟುನೂರು ವರ್ಷಗಳಷ್ಟು ಹಿಂದೆಯೇ ಭಕ್ತಿಭಂಡಾರಿ ಬಸವಣ್ಣನವರು ಉಂಟುಮಾಡಿದ ಧರ್ಮಜಾಗೃತಿ, ವೈಚಾರಿಕ ಕ್ರಾಂತಿ, ಸರ್ವಸಮತಾ ತತ್ತ್ವದ ಮೇಲೆ ರಚಿಸಿದ ಸಮಾಜ, ಮಹತ್ತರವಾದ ಕೊಡುಗೆ. ಕರ್ನಾಟಕದ ಶರಣರ ಮತ್ತು ದಾಸರ ಭಕ್ತಿ ಪರಂಪರೆ ಸ್ಮರಣೀಯವಾದ ಕೊಡುಗೆ.

ಧರ್ಮ ಎಂಬುದು ವಿಶಾಲವಾದ ಅರ್ಥವ್ಯಾಪ್ತಿಯುಳ್ಳ ಪದ, ಎಲ್ಲಕ್ಕೂ ಆಧಾರವಾದುದು. ಎಲ್ಲರನ್ನೂ ಒಗ್ಗೂಡಿಸುವಂತಹದು. ಜಾತಿಯಂತೆ ಒಡೆಯುವ, ವಿಭಜಿಸುವ ವ್ಯವಸ್ಥೆ ಅಲ್ಲ. ಸೃಷ್ಟಿಯ ಸಕಲ ವ್ಯಾಪಾರಗಳನ್ನೂ ನಿಯಂತ್ರಿಸುವ 'ಋತ'. ಧರ್ಮ ಎಂದರೆ ಜಾತಿ ಎಂದು ತಿಳಿಯುವುದು ತಪ್ಪು. ಧರ್ಮ ವಿಶಾಲವಾದ ನೆಲ ಇದ್ದ ಹಾಗೆ. ಜಾತಿ-ಮತ ಅದರ ಮೇಲೆ ಅವರವರ ಅಗತ್ಯಕ್ಕೆ-ಅಭಿರುಚಿಗೆ ತಕ್ಕಂತೆ ಕಟ್ಟಿದ ಮನೆಗಳು. ಮನೆಗಳ ಒಳಗಿನ ಮತ್ತು ತಳಪಾಯದ ನೆಲ ಧರ್ಮವೆ. ಈ ಧರ್ಮವೇ ಕನ್ನಡಿಗರ ಸಂಸ್ಕೃತಿಯ ಜೀವಾಳ. ಒಂದು ತತ್ತ್ವವಾಗಿ ಅಲ್ಲ. ವ್ಯಕ್ತಿ ಹಾಗೂ ಸಮಾಜದ ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾದ ಮಾನವೀಯ ಮನೋಧರ್ಮವಾಗಿ. ಜೀವನದ ಎಲ್ಲ ಕ್ಷೇತ್ರಗಳಲ್ಲೂ ಧರ್ಮವನ್ನಳವಡಿಸಿಕೊಂಡು ಕನ್ನಡಿಗರು ಬೆಳೆದರು. ಸಾಹಿತ್ಯ, ಶಿಲ್ಪ, ಸಂಗೀತ, ನೃತ್ಯ ಎಲ್ಲಕ್ಕೂ ಧರ್ಮವೇ ಸ್ಫೂರ್ತಿ, ಪಥ ಮತ್ತು ಗುರಿ.

ಕನ್ನಡಿಗರದು ಸಮನ್ವಯ ಮನೋಧರ್ಮ. ಅತಿ ಪ್ರಾಚೀನವಾದ ನಾಗ, ಅನಂತರ ಕಾಲಕ್ರಮದಲ್ಲಿ ಬಂದ ಕಾಪಾಲಿಕ, ಶಾಕ್ತೇಯ, ಶೈವ, ವೈಷ್ಣವ, ಜೈನ, ಬೌದ್ಧ, ಇಸ್ಲಾಂ ಮತ್ತು ಕ್ರೈಸ್ತ ಎಲ್ಲ ಧರ್ಮಗಳಿಗೂ ಆಶ್ರಯವನ್ನು ಕೊಟ್ಟಿತು. ಆದಿ ಶಂಕರರನ್ನು ಆಕರ್ಷಿಸಿತು. ಶ್ರೀರಾಮಾನುಜರಿಗೆ ಆಶ್ರಯವಿತ್ತಿತು. ಬಸವಾದಿ ಶರಣರಿಗೆ, ಮಧ್ವಾಚಾರ್ಯ, ವ್ಯಾಸರಾಯರಾದಿಯಾಗಿ ಹರಿಭಕ್ತ ಶ್ರೇಷ್ಠರಿಗೆ, ದಾಸರಿಗೆ ಜನ್ಮವಿತ್ತು ಪುಣ್ಯಭೂಮಿ ಎನಿಸಿತು. ಮತ-ಧರ್ಮ ಬೇರೆ ಬೇರೆ ಆಗಬಹುದು. ಆರಾಧಿಸುವ ದೈವ, ಧಾರ್ಮಿಕ ಸಂಪ್ರದಾಯಗಳು ಬೇರೆ ಬೇರೆ ಆಗಬಹುದು. ಆದರೆ ಅವುಗಳೆಲ್ಲ ಒಂದೆ ಸತ್ಯದ ಗುರಿಗೆ ಕೊಂಡೊಯ್ಯುವ ಬೇರೆ ಬೇರೆ ದಾರಿಗಳು ಅಷ್ಟೆ. ಇಂತಹ ಸಮಭಾವ ಕನ್ನಡಿಗರಲ್ಲಿ ಪರಂಪರಾಗತವಾಗಿ ಬಂದುದು.



ಅವರವರ ದರುಶನಕೆ ಅವರವರ ದೇಶದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ।
ಅವರವರ ಭಾವಕ್ಕೆ ಅವರವರ ಅರ್ಚನೆಗೆ
ಅವರವರಿಗೆಲ್ಲ ದೇವ ನೀನೊಬ್ಬನೆ ॥

ಭಕ್ತ ಕವಿ, ಶರಣ, ಮುಪ್ಪಿನ ಷಡಕ್ಷರಿಯ ಈ ಲಲಿತ-ಸುಂದರವಾದ ಹಾಡು, ಅದರ ಭಾವನೆ ಕನ್ನಡಗರ ಮನಕ್ಕೆ ಹಿಡಿದ ಕನ್ನಡಿ.

ಸರ್ವಧರ್ಮ ಸಮನ್ವಯ ಮಾತ್ರವಲ್ಲ, ಇಹ-ಪರ, ತ್ಯಾಗ-ಭೋಗಗಳ ಸಮನ್ವಯ ಬದುಕಿನಲ್ಲಿ ಸಹಜವಾಗಿರಬೇಕು ಎಂಬುದು ಕನ್ನಡಿಗರ ಆಶಯ. ಪಂಪ, ರತ್ನಾಕರರ ಕಾವ್ಯಗಳಲ್ಲೂ, ಶರಣರ ವಚನಗಳಲ್ಲೂ ಇದು ಅಭಿವ್ಯಕ್ತವಾಗಿದೆ. ತ್ಯಾಗವಿಲ್ಲದ- ಸಂಯಮವಿಲ್ಲದ ಭೋಗ ಅಲ್ಪವಾದುದು. ಅಲ್ಪವಾದ ಸುಖಕ್ಕಿಂತ ಮಹತ್ತಾದ ಸುಖವನ್ನು ಅಪೇಕ್ಷಿಸುವವರಾದರೂ ಲೌಕಿಕದ ಬಗ್ಗೆ ಹುಸಿ ವೈರಾಗ್ಯದ ತಿರಸ್ಕಾರವಿಲ್ಲ.

'ಬೆಳಗುವೆನಿಲ್ಲಿ ಜಿನಾಗಮಮಂ', ಎಂಬ ಆತ್ಮವಿಶ್ವಾಸ. ಪಾರಮಾರ್ಥಿಕದಂತೆ ಲೌಕಿಕವೂ ಬೆಳಗಬೇಕೆಂಬ ಧ್ವನಿ. ಎರಡರಲ್ಲೂ ಬೆಳಗುವ ದೀಪ ಧರ್ಮವಾದುದರಿಂದ ಇದು ಸಾಧ್ಯ. ಈ ಮನೋಧರ್ಮದ ಸಾಧಕನಿಗೆ 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ.' 'ಇಲ್ಲಿಯೂ ಸಲ್ಲುವ, ಅಲ್ಲಿಯೂ ಸಲ್ಲುವ' ದಿಟದ ನಾಣ್ಯ ಆಗುವುದೇ ಜೀವನದ ಗುರಿ. ಅಲ್ಲಿಯೂ ಸಲ್ಲುವಂತೆ ಇಲ್ಲಿ ಬಾಳಬೇಕು.

ಹೀಗೆ ಬಾಳಬೇಕಾದರೆ 'ದಯವೇ ಧರ್ಮದ ಮೂಲ' ಆಗಬೇಕು. ಹುಟ್ಟಿನಿಂದ ಯಾರೂ ಉತ್ತಮ ಕುಲದವರಾಗುವುದಿಲ್ಲ. ದೇವರಲ್ಲಿ ಅಚಲವಾದ ಭಕ್ತಿ, ಸಹಜೀವಿಗಳಲ್ಲಿ ಪ್ರೀತಿ, ಅನುಕಂಪ, ತ್ರಿಕರಣಶುದ್ಧವಾದ ಶೀಲ ಸಂಪತ್ತುಗಳಿದ್ದು, ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರೇ ಕುಲಜರು. ಧರ್ಮ ಚರ್ಚಾ ವಿನೋದಕ್ಕೂ, ಬೌದ್ಧಿಕ ರಂಜನೆಗೂ ಇರುವಂತಹ ಬರಿಯ ತತ್ತ್ವ ಸಿದ್ಧಾಂತವಲ್ಲ. ಬಾಳಿನಲ್ಲಿ ಆಚರಿಸುವ ಜೀವಂತ ಮೌಲ್ಯ.

ಧಾರ್ಮಿಕ ಶ್ರದ್ಧೆಯನ್ನು ಪೋಷಿಸಿ, ಉಳಿಸಿಕೊಂಡು ಬರುವುದರಲ್ಲಿ ದೇವಾಲಯಗಳು, ಮಠಗಳು ಪ್ರಮುಖ ಪಾತ್ರವನ್ನು

ವಹಿಸಿದವು. ಧರ್ಮ ಹಾಗೂ ಸಂಸ್ಕೃತಿಯ ಸ್ಫೂರ್ತಿ ಕೇಂದ್ರಗಳಾಗಿದ್ದ ಕನ್ನಡ ದೇವಾಲಯಗಳ ಪರಂಪರೆ ಬಹು ಪ್ರಾಚೀನವಾದುದು. ಅದ್ವಿತೀಯವಾದ ಚೆಲುವುಳ್ಳ ಮೂರ್ತಿ ಶಿಲ್ಪ, ಭವ್ಯವಾದ ಸೌಧ, ಶಿಲ್ಪಗಳಿಂದ ಭಕ್ತರ ಚಿತ್ತವನ್ನು ದಿವ್ಯತೆಯ ಕಡೆ ಆಕರ್ಷಿಸುತ್ತಿದ್ದ ಹಲವಾರು ದೇಗುಲಗಳನ್ನು ನಿರ್ಮಾಣ ಮಾಡುವುದೇ ನಾಡರಸರ ಧನಸಂಪತ್ತನ್ನು ಸಾರ್ಥಕಗೊಳಿಸುವ ಧರ್ಮಕಾರ್ಯವೆನಿಸಿತ್ತು. ಭಾವುಕ ಜನರ ಭಕ್ತಿವೃದ್ಧಿಯನ್ನು ಈ ದೇಗುಲಗಳೂ, ಧರ್ಮಸಾಹಿತ್ಯ ಪ್ರಸಾರವನ್ನು ಮಠಗಳೂ ಚೆನ್ನಾಗಿ ಮಾಡಿದವು. ಭಕ್ತಿಗಿಂತ ಆಡಂಬರವೇ ಮುಖ್ಯವಾಗಿ, ಅಜ್ಞಾನ, ಅಂಧಶ್ರದ್ಧೆಯಿದ್ದ ಜನತೆಯನ್ನು ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುವ ಅರ್ಚಕ ವರ್ಗದವರ ದುರಾಚಾರಗಳಿಗೆ ಕೆಲವು ದೇಗುಲಗಳು ಆಸ್ಪದ ಕೊಟ್ಟದ್ದೂ ಉಂಟು. ಹಾಗೆಯೆ ಮಹಾತ್ಮರ ಕಾಲದಲ್ಲಿ ನಿರ್ಮಲ ಜಲವಾಗಿ ಬೆಳಗುವ ಧರ್ಮ ಉಳಿದ ಕಾಲದಲ್ಲಿ ಅರ್ಥವಿಲ್ಲದ ಆಚರಣೆ, ಮೂಢನಂಬಿಕೆ, ಪುರೋಹಿತ ವರ್ಗದ ಅನಾಚಾರ, ಜಾತೀಯತೆಗಳ ಪಾಚಿಗಟ್ಟಿದ ಕೊಳವಾಗುವುದೂ ನಿಜ. ಬಸವಾದಿ ಶರಣರಂತಹ ವಿಚಾರವಂತರು ಜಾತೀಯತೆಯ ವಿಷಯವನ್ನು ಹೋಗಲಾಡಿಸಿ ವಿಶಾಲವಾದ ವಿಶ್ವಧರ್ಮವನ್ನು ನೆಲೆಗೊಳಿಸಲು ಮಾಡಿದ ಪ್ರಯತ್ನಗಳೆಲ್ಲ ನಂತರದ ಶತಮಾನಗಳಲ್ಲಿ ವಿಫಲವಾಗಿ ಜಾತೀಯತೆಯ ತೊಡಕಿಗೆ ಮತ್ತೆ ಮತ್ತೆ ಬೀಳುವುದೊಂದು, ಮಾನವರ ತಿದ್ದಲಾಗದ ದೌರ್ಬಲ್ಯವೊ ಎಂದೆನಿಸುವ ಹಾಗೆಯೂ ಆಯಿತು.



ಧಾರ್ಮಿಕ ಹಬ್ಬಗಳೂ ರಥೋತ್ಸವಗಳೂ ಜನತೆಯ ದೈವಭಕ್ತಿ, ಧಾರ್ಮಿಕ ಶ್ರದ್ಧೆಗಳ ಅಭಿವ್ಯಕ್ತಿ ಸಾಧನವಾಗಿರುವುದಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಸಂಪರ್ಕ ಸಾಧನಗಳಾಗಿ ಜನರಲ್ಲಿ ಭಾವೈಕ್ಯತೆಯನ್ನೂ ಜೀವನೋತ್ಸಾಹ, ಉಲ್ಲಾಸಗಳನ್ನೂ ಪೋಷಿಸುತ್ತಾ ಬಂದಿವೆ.

ಕನ್ನಡಿಗರ ಮನೋಧರ್ಮದಲ್ಲಿ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳೆರಡೂ ಹಾಸು ಹೊಕ್ಕಾಗಿ ಹೆಣೆದುಕೊಂಡಿವೆ. ೧೩ನೆ ಶತಕದ ಒಂದು ಶಾಸನದಲ್ಲಿ ರಟ್ಟ ಲಕ್ಷ್ಮೀದೇವನ ಆಳ್ವಿಕೆಯಲ್ಲಿ 'ಅಪರಾಧಗಳೇ ಇರಲಿಲ್ಲ ಎಂದ ಮೇಲೆ ದಂಡದ ಮಾತೇಕೆ?' ಎಂದು ಬರೆದಿದೆ. ಹಾಲು-ಹೈನು, ಕಾಳು-ಕಡ್ಡಿ ಸಮೃದ್ಧಿಯಿತ್ತು. ತೆರಿಗೆ ಹೆಚ್ಚಾಗಿರಲಿಲ್ಲ ಎಂಬ ಮಾತೂ ಬಂದಿದೆ.

ಕನ್ನಡನಾಡಿನಲ್ಲಿ ಮಾವು-ಮಲ್ಲಿಗೆಗಳು ಸಮೃದ್ಧವಾಗಿದ್ದರೂ ಅವುಗಳನ್ನು ಮಾಗಿದ ಅರೆಯರಳಿದ-ಸಕಾಲದಲ್ಲೇ ರಸಿಕರಾದ ಕನ್ನಡಿಗರು ಉಪಯೋಗಿಸುತ್ತಾರೆ. ಆದ್ದರಿಂದ ಅವು ಕೊಳೆತು ಹಾಳಾಗಿ ಹೋಗುವ ಸಂದರ್ಭವೇ ಬರುವುದಿಲ್ಲ ಎಂದು ಆದಿಕವಿ ಪಂಪ ತನ್ನ ಕಾವ್ಯದಲ್ಲಿ ತನ್ನ ನಾಡಿನವರ ರಸಿಕತೆಯನ್ನು ಕೊಂಡಾಡಿದ್ದಾನೆ. ಸಮೃದ್ಧಿ-ರಸಿಕತೆ ಎರಡೂ ಇದ್ದರೂ ಭೋಗಲೋಲುಪರಾಗದೆ ಕನ್ನಡಿಗರು ಧರ್ಮವಿನೋದಿಗಳೂ ಹಾಗೆಯೆ ದಾನವಿನೋದಿಗಳೂ ಆಗಿದ್ದರೆಂಬುದಕ್ಕೆ ಹಲವಾರು ಶಾಸನಗಳ ಉಲ್ಲೇಖವಿದೆ. ಸತ್ಯ, ತ್ಯಾಗ, ದಾನ ಗುಣವುಳ್ಳವರಾಗಿ, ರಕ್ಷಣೆ ಬೇಡಿ ಬಂದವರನ್ನು ಪ್ರಾಣ ಕೊಟ್ಟಾದರೂ ರಕ್ಷಿಸುವ ಸ್ವಭಾವದವರಾಗಿರುವ ಕನ್ನಡಿಗರದು ಕೊಟ್ಟ ಮಾತಿಗೆ ತಪ್ಪದ ನಿಷ್ಠೆ. ಪರಮತ ಸಹಿಷ್ಣುತೆ, ದಯೆ, ಔದಾರ್ಯ, ಅತಿಥಿ ಸತ್ಕಾರಾಕಾಂಕ್ಷೆ, ಸ್ವಾಮಿನಿಷ್ಠೆ — ಇವೇ ಅವರ ಬದುಕಿನಲ್ಲಿ ಪ್ರಧಾನವಾಗಿ ಹೊಳೆಯುವ ಜೀವನ ಮೌಲ್ಯಗಳು. ಶಾಸನಗಳಲ್ಲೆಲ್ಲ ಕನ್ನಡಿಗರ ಉದಾರವಾದ ದಾನ-ದತ್ತಿಗಳ ಮಾತೇ! ದಾನದಲ್ಲಿ ನಾಲ್ಕು ಬಗೆಯಂತೆ. ೧) ಪ್ರವಾಸಿಗಳಿಗೆ, ವಿದ್ಯಾರ್ಥಿಗಳಿಗೆ, ಮತ್ತು ದೀನರಿಗೆ ಅನ್ನದಾನ, ೨) ಪೀಡಿತರಿಗೆ ಸಂರಕ್ಷಣೆಯ ಅಭಯದಾನ ೩) ರೋಗಿಗಳಿಗೆ ಔಷಧಿ ದಾನ ೪) ಎಲ್ಲರಿಗೂ ವಿದ್ಯಾದಾನ. ಅರಸರು, ಅಧಿಕಾರಿಗಳು, ಮಹಾಜನರು ಈ ದಾನಗಳನ್ನು ಸಂತೋಷದಿಂದ, ಶ್ರದ್ಧೆಯಿಂದ ಮಾಡುತ್ತಿದ್ದರಂತೆ.

ಅರಸರು, ಅಧಿಕಾರಿಗಳು, ಮಹಾಪುರುಷರ ಮಾತಿರಲಿ ಅವಿದ್ಯಾವಂತರು, ಅನಕ್ಷರಸ್ಥರು ಎಂದೆನಿಸಿಕೊಂಡು ಸಾಮಾನ್ಯ ಹಳ್ಳಿಗರಲ್ಲೂ ಸಮನ್ವಯ ಮನೋಧರ್ಮ ಸ್ವಾಭಾವಿಕವಾಗಿರುವುದನ್ನು ಹಲವಾರು ಜಾನಪದ ಗೀತೆಗಳಲ್ಲಿ ಕಾಣಬಹುದು. ಧಾರ್ಮಿಕ ಶ್ರದ್ಧೆ, ದೈವಭಕ್ತಿ, ಅವರ ಜೀವನದ ಉಸಿರು. ಬಾಳಿನ ಎಲ್ಲ ಆಗುಹೋಗುಗಳಿಗೂ ಶಿವನಿಚ್ಛೆಯೇ ಕಾರಣ ಎಂಬ ದೃಢವಾದ ನಂಬುಗೆ. ತಿರುಪತಿ ತಿಮ್ಮಪ್ಪ, ಮಲೆಯ ಮಾದೇಶ್ವರ, ಶ್ರೀಶೈಲದ ಮಲ್ಲಯ್ಯ, ಸವದತ್ತಿ ಎಲ್ಲವ್ವ, ಗಣಪತಿ, ರಾಮದೇವರು, ಹನುಮಪ್ಪ, ಸರಸೋತಿ, ಗೌರಮ್ಮ, ದುರ್ಗಮ್ಮ ಮೊದಲಾಗಿ ಅನೇಕ ದೇವ, ದೇವತೆಗಳ ಉಪಾಸನೆ, ಮೂಢನಂಬಿಕೆಗಳು, ಭೀತಿಯಿಂದಾದ ಭಕ್ತಿ — ಇವೇ ಬಹುಮಟ್ಟಿಗೆ ಜನಪದ ಜೀವನದಲ್ಲಿ ಕಾಣುವುವಾದರೂ, ವಿವಿಧ ಹಂತಗಳಲ್ಲಿರುವ ಆಧ್ಯಾತ್ಮಿಕ ಸಾಧಕರನ್ನು ಗುರುತಿಸಬಹುದು. ಒಟ್ಟಿನಲ್ಲಿ ಅವರ ಮನೋಧರ್ಮದಲ್ಲಿ ಧಾರ್ಮಿಕ ಶ್ರದ್ಧೆ ಆಳವಾಗಿ ಬೇರೂರಿರುವುದು ಸುವ್ಯಕ್ತ.

ಸಂಸಾರ ದಂದುಗ ಹಿಂಗಾದೊ ಶಿವರಾಯ
ಹಿಂಗುದಕೆ ದಾರಿ ಶರಣರದ । ತಿಳಿಕೊಂಡು
ಗೆದಿಬೇಕ ಇದ್ದು ಸಂಸಾರ ॥

ಸಂಸಾರದ ದಂದುಗ ಹಿಂಗದೆಂಬ ಹತಾಶೆಯೇಕೆ? ಶರಣರು ತೋರಿದ ದಾರಿಯಲಿ ನಡೆದು ಸಂಸಾರದಲ್ಲಿ ಇದ್ದೂ ಅದನ್ನು ಗೆಲ್ಲಬೇಕು ಎಂಬ ನಿಲುವು ಧೀರವಾದುದು, ಸರಿಯಾದುದು.

ಮಾದೇವ ನಿನ ಹೊರ್ತು ನಾನ್ಯಾರ್ನೂ ನಂಬಿಲ್ಲ
ನಾ ಮಾಡೆನೆಂಬ ಅಳವಿಲ್ಲ। ಮಲ್ಲಯ್ಯ
ನೀ ನಡಸು ನನ್ನ ಸರುವೆಲ್ಲ॥

ಮಂದಿ ಮಂದಿ ಎಂದು ಮಂದಿ ನಂಬಲಿ ಹೋದೆ
ಮಂದಿ ಬಿಟ್ಟಾರು ನಡುನೀರ। ಮಲ್ಲಯ್ಯ
ತಂದೆ ನನ ಕೈಯ ಬಿಡಬೇಡ॥

ಈ ಶ್ರದ್ಧೆ, ನಿಷ್ಠೆ ಸಂಪೂರ್ಣ ಶರಣಾಗತಿಯ ನಿಲವು ಇದ್ದರೆ ಸಂಸಾರ ದಂದುಗವೆಲ್ಲವೂ ಹಗುರವಾಗುವುದು.

ನಾರಾಯಣ ನಿನ್ನ ನಾಮದ ಬೀಜವ
ನಾನೆಲ್ಲಿ ಬಿತ್ತಿ ಬೆಳೆಯುವೆ। ನಿನ ನಾಮ
ನಾಲಿಗಿ ಮ್ಯಾಲ ಬೆಳೆದೇನೊ॥

ಅಕ್ಕವ್ವ ಸರಸೋತಿ ಬಾಗ್ಲಾಗ ಯಾಕ್ನಿಂತಿ
ಕೊಡತೀನಿ ಬಾರ ನಿನಗಿಂಬ। ನನ್ನಮನದ
ಜಗುಲೀ ಮ್ಯಾಗ ಒರಗವ್ವ॥

ಎನ್ನುವ ಜಾನಪದಕ್ಕೆ ದೇವರು, ಧರ್ಮ ಎಂಬುವು ಮೇಲೆ ಹೇರಿಕೊಂಡ ಉಪಾಧಿ ಅಲ್ಲ , ಅಂಟಿಸಿಕೊಂಡ ಮೂಢನಂಬಿಕೆ ಅಲ್ಲ. ತಮ್ಮ ಮೈ-ಮನಗಳನ್ನು ಆವರಿಸಿಕೊಂಡು ಸ್ವಭಾವದಲ್ಲಿ ಸವಿಯಾಗಿ ಬೆರೆತು, ಮನೋಧರ್ಮದಲ್ಲಿ ಒಂದಾದ ದೃಢ ವಿಶ್ವಾಸ, ಪ್ರಚಲಿತ ಚೇತನ. ದೇವರ ಬಗೆಗೆ ಈ ಸಾಮಾನ್ಯರ ಎದೆ ಮಿಡಿತ ಬಹು ಸುಂದರವಾದದು. ದೇವರು ಎಲ್ಲೋ ಕುಳಿತು ದರ್ಬಾರು ಮಾಡುವ, ಅಧಿಕಾರ ಚಲಾಯಿಸುವ ಸಾಮ್ರಾಟನಲ್ಲ. ಅವನು ನಿತ್ಯಜೀವನದ ನಂಟು. ಆತ್ಮೀಯ ಮಿತ್ರ ಎಂಬಷ್ಟು ಸಲುಗೆ! ಹಬ್ಬ ಹರಿದಿನಕ್ಕೆ ಬಂದು ಹೋಗುವ ಅಳಿಯ, ಭಾವ ನೆಂಟ ಆ ಶಿವ. ಗೌರಿ, ಗಿರಿಜೆ ಈ ನೆಲದ ಗಿರಿರಾಜನ ಪ್ರೀತಿಯ ಮಗಳು. ಕೈಲಾಸದ ಶಿವನನ್ನೇ ಮದುವೆಯಾಗಬೇಕೆಂದು ಆಶಿಸಿ, ಸಂಕಲ್ಪಿಸಿ ತಪಸ್ಸು ಮಾಡಿ, ಆತನೆ ಒಲಿದು ತನ್ನೆಡೆಗೆ ಬರುವಂತೆ, ಮಾಡಿದವಳು. ಒಲಿದು ಬಂದ ಶಿವ, ಗಿರಿಜೆಯನ್ನು ತನಗೆ ಮದುವೆ ಮಾಡಿಕೊಡಿರೆಂದು ಗಿರಿರಾಜನನ್ನು ಬೇಡುತ್ತಾನೆ. ಹರಿಬ್ರಹ್ಮಾದಿ ಸಕಲ ದೇವತೆಗಳು, ಮುನಿಜನರು ಗಿರಿಜಾಕಲ್ಯಾಣಕ್ಕೆ ಬರುತ್ತಾರೆ. ಹೀಗೆ ಕೈಲಾಸದೊಂದಿಗೆ ನಮ್ಮ ಬೀಗತನ ಆರಂಭವಾಗುತ್ತದೆ. ಇಹ ಮತ್ತು ಪರಗಳ ಈ ಮಧುರ ಸಂಬಂಧದ ಕಲ್ಪನೆಯೆ ಭವ್ಯ ವಾದುದು.

ಲೋಕವ್ಯಾಪಿಯೂ ಲೋಕಾತೀತನೂ ಆಗಿರುವ ಭಗವಂತ ನನ್ನು ಈ ಸಹಜ ಸಾಧಕರು ಎಲ್ಲೆಲ್ಲಿಯೂ ಕಾಣುತ್ತ ಆನಂದಿಸು ತ್ತಾರೆ:

ಹೂವಿನ್ಯಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಯಾಗ ಕಣ್ಣು ತೆರೆದಾನ। ಲಿಂಗಯನ
ನೋಡಟಗಿ ನಿದ್ದಿ ಬಯಲಾಗಿ॥

ಅನುಭಾವಿಗಳಾದ ಇವರು ಸಾಮಾನ್ಯರಾಗಿ ಕಾಣುವ ಗುಪ್ತ ಯೋಗಿಗಳು.

ಶಿವಶರಣರ, ಹರಿದಾಸರ ಅನುಭಾವ ಗೀತೆಗಳಂತೂ ಈ ಲೋಕದಲ್ಲಿ ಹೇಗ ಬಾಳಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳ ಬೇಕು, ಹೇಗೆ ಸಂಸಾರದಲ್ಲಿದ್ದುಕೊಂಡೇ ಪಾರಮಾರ್ಥವನ್ನೂ ಸಾಧಿಸಿಕೊಳ್ಳಬೇಕು ಎಂಬುದನ್ನು ಹೃದ್ಯವಾಗಿ ತಿಳಿಯಪಡಿಸುತ್ತವೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲ ಸಂಗನನೊಲಿಸುವ ಪರಿ

ಎಂಬ ಬಸವಣ್ಣನವರ ಸರಳ ಸುಂದರ ವಚನ — ನೀತಿಸೂತ್ರ ಕನ್ನಡಿಗರ ಚೊಕ್ಕ ಬದುಕಿನ ಸಮಗ್ರ ಆದರ್ಶವನ್ನು ಅಭಿವ್ಯಕ್ತ ಗೊಳಿಸುತ್ತದೆ.

ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ
ಬಿಲ್ಲಾಗಿ ಇರಬೇಕು ಬಲ್ಲವರೊಳಗೆ।

ಸತ್ಸಂಗದಲ್ಲಿ ವಿನಯವಾಗಿ ಬಲ್ಲವರಲ್ಲಿ ಬೆಲ್ಲವಾಗಿ, ಮತಾಬ್ಧಿ ಯಲ್ಲಿ ಮೀನಾಗಿ ಆತ್ಮ ಶೋಧನೆಯಲ್ಲಿ ಶುದ್ಧನಾಗಿ ಇರಬೇಕು ಎನ್ನುತ್ತಾರೆ ಪುರಂದರದಾಸರು. ಜೀವನದ ಬಗ್ಗೆ ಸರಿಯಾದ ತಿಳಿ ವಳಿಕೆಯಿಟ್ಟುಕೊಂಡವರಿಗೆ ದುಃಖದ ಬೇಗೆ ತಾಕುವುದಿಲ್ಲ. ಬಾಳು: ಮಕ್ಕಳಾಗಿ ಮನೆ ಕಟ್ಟಿದಂತೆ; ಆಟ ಸಾಕೆಂದು ಆಳಿಸಿ ಪೋದಂತೆ. ಆದ್ದರಿಂದ ಮೋಹಕ್ಕೆ ಬೀಳದೆ ಭಕ್ತಿಯಿಂದ ಭಗವನ್ನಾಮಸಂಕೀ ರ್ತನೆ ಮಾಡುತ್ತಾ ಮಾಡಬೇಕಾದ ಕರ್ತವ್ಯಗಳನ್ನು ಚ್ಯುತಿಯಿಲ್ಲ ದಂತೆ ಸಮರ್ಪಕವಾಗಿ ಮಾಡುತ್ತ ಸದಾ ಸಂತೋಷದಿಂದಿರುವುದೇ ಜೀವನ ಕಲೆ. ಜಪ-ತಪ, ಆಡಂಬರದ ಪೂಜೆ, ನೇಮ-ನಿಷ್ಠೆ ಇವೆಲ್ಲ ಕೇವಲ ಬೂಟಾಟಿಕೆಯಾಗಬಾರದು. ಎಲ್ಲಕ್ಕೂ ಮುಖ್ಯ ವಾದುದು ಹೃದಯಶುದ್ಧಿ, ಭಕ್ತಿ ಮತ್ತು ಅಹಂಕಾರರಹಿತವಾದ ಸೇವೆ. ಪರಿಶುದ್ಧವಾದ ಹೃದಯದಲ್ಲಿ ಪ್ರೇಮವೊಂದೇ ದಿಟ. ವೈರಕ್ಕೆ ಎಡೆಯಿಲ್ಲ.

ವಿಷವಿಕ್ಕಿದವಗೆ ಷಡ್ರಸವನುಣಿಸಲಿ ಬೇಕು
ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು
ಕೊಂಡೊಯ್ದು ಬಡಿಯುವರ ಕೊಂಡಾಡಬೇಕು

ಇದು ಹರಿದಾಸರ ಕಿವಿ ಮಾತು. ಶರಣರು, ಭಕ್ತಿ ಕವಿಗಳೂ ಇದೇ ಮನೋಭಾವದವರು. ಇತ್ತೀಚಿನ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ', ಕುವೆಂಪುರವರ ಭಕ್ತಿ-ಅಧ್ಯಾತ್ಮ ಗೀತೆಗಳು,

ಕೈಲಾಸಂ ನಾಟಕಗಳು, ಪರಂಪರಾಗತವಾಗಿ ಬಂದಿರುವ ಕನ್ನಡಿಗರ ಮನೋಧರ್ಮವನ್ನೂ ಎತ್ತಿಹಿಡಿಯುವ ಜೀವನದ ಹಿರಿಯ ಮೌಲ್ಯಗಳನ್ನೂ ಆಯಾ ಕಾಲಕ್ಕನುಗುಣವಾದ ಹೊಸ ಹೊಸ ರೀತಿಯಲ್ಲಿ ಆಯಾ ಕವಿಗಳ ವಿಶಿಷ್ಟ ಅಭಿವ್ಯಕ್ತಿಯಲ್ಲಿ ಪ್ರಕಟಿಸಿವೆ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ।
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಗೆ
ಎಲ್ಲರೊಳಗೊಂದಾಗು – ಮಂಕುತಿಮ್ಮ ॥

ಹೀಗೆ ವಿನಯ, ಸೌಜನ್ಯ, ಸಹನೆ, ಅನುಕಂಪೆ, ಸೇವಾಕಾಂಕ್ಷೆ, ಸಹಬಾಳ್ವೆಯ ಗುಣಗಳು ಕನ್ನಡಿಗರಲ್ಲಿ ಹಿರಿಯ ಪರಂಪರೆಯಾಗಿ ಮೈಗೂಡಿದ್ದವು. ಅದೇ ಆದರ್ಶದ ಬೆಳಕಿನಲ್ಲಿ ನಡೆಯಬೇಕೆನ್ನುವವರು ನಾವು.

ಈ ಆದರ್ಶ ಮುಖ್ಯವಷ್ಟೆ ಅಲ್ಲ. ವಾಸ್ತವದಲ್ಲಿ ಮಾನವ ಸಹಜವಾದ ದುರ್ಗುಣ-ದೋಷ-ದೌರ್ಬಲ್ಯಗಳೂ ಇವೆ. ಧರ್ಮವನ್ನು ಮರೆತ ಜಾತೀಯ ವೈಷಮ್ಯ ಎಲ್ಲ ಕಾಲದಲ್ಲೂ ಇದ್ದೇ ಇದೆ. ಪ್ರಮಾಣದಲ್ಲಿ ವ್ಯತ್ಯಾಸ ಅಷ್ಟೆ. ಇಂದು — ಈ ವಿಜ್ಞಾನ ಯುಗದಲ್ಲೂ— ಕನ್ನಡನಾಡಿನಲ್ಲಷ್ಟೇ ಅಲ್ಲ ಸಮಸ್ತ ಭಾರತದಲ್ಲಿ, ಇಡೀ ಜಗತ್ತಿನ ಎಲ್ಲ ಕಡೆ ಧರ್ಮದ ಹೆಸರಿನಲ್ಲಿ ಕ್ಷುದ್ರವಾದ ಕೋಮುದ್ವೇಷದ — ಮೂಲಭೂತ ವಾದದ — ವರ್ಣದ್ವೇಷದ ವಿಷ ವ್ಯಾಪಿಸಿದೆ. ಯುವಜನರ ಮನವನ್ನು ಕದಡಿ ಬಗ್ಗಡ ಮಾಡಿದೆ. ದೊಡ್ಡವರನ್ನು ತಿದ್ದುವುದು ಅಸಾಧ್ಯ. ಕಿರಿಯ ಪ್ರಾಯದವರೂ ಈ ದುರ್ಭಾವನೆಗಳಿಗೆ ಒಳಗಾಗಿರುವುದೇ ಆತಂಕವುಂಟುಮಾಡಿದೆ.

ಮತೀಯ ವೈಷಮ್ಯದ ಕಲಹಗಳಿಗೆ ಮುಖ್ಯವಾದ ಕಾರಣಗಳು ಎರಡು: ಒಂದು, ಅತಿರೇಕದ ಸ್ವಾರ್ಥ ಮತ್ತು ಸಂಕುಚಿತ ದೃಷ್ಟಿ. ಎರಡನೆಯದು: ಧರ್ಮದ ಹೆಸರಿನಲ್ಲಿ ಸರಿಯಾದ ತಿಳಿವಳಿಕೆ ಇಲ್ಲದಿರುವುದು. ಜಾತಿಯ ಹೆಸರಿನಲ್ಲಿ ಏನು ಮಾಡಲೂ ಹೇಸದ ದುರಭಿಮಾನಿಗಳಿಗೆ ತಮ್ಮ ಧರ್ಮವೇ ಚೆನ್ನಾಗಿ ತಿಳಿಯದು. ಅಧಿಕಾರ, ಸ್ಥಾನ, ಧನ ಮುಂತಾದ್ದನ್ನು ನ್ಯಾಯವೋ ಅನ್ಯಾಯವೋ ಹೇಗಾದರೂ ಸಂಪಾದಿಸಬೇಕೆಂಬ ದುಷ್ಟ-ಸ್ವಾರ್ಥ ಸಾಧಕರು ಪ್ರತಿಯೊಂದಕ್ಕೂ ಜಾತಿಯ ಬಣ್ಣ ಬಳಿಯುತ್ತಾರೆ. ಇದರಲ್ಲಿ ವಿದ್ಯಾವಂತರೆನಿಸಿಕೊಂಡವರದೇ (ತಿಳಿವಳಿಕೆ ಮಾತ್ರ ಇಲ್ಲದವರದೇ) ಪ್ರಧಾನ ಪಾತ್ರ. ಇಂಥ ಮುಂದಾಳುಗಳನ್ನು ಹಲವು ಜನ ಹುಂಬರು ವಿವೇಚಿಸದೆ ಕುರಿಮಂದೆಯ ಹಾಗೆ ಅನುಸರಿಸುತ್ತಾರೆ. ತಮ್ಮ ಜಾತಿಯ ಹಕ್ಕುಗಳಿಗಾಗಿ, ತಮ್ಮ ಜಾತಿಗೆ ಸಲ್ಲಬೇಕೆಂಬ ನ್ಯಾಯಕ್ಕಾಗಿ ಹೋರಾಡುತ್ತಿದ್ದೇವೆ ಎಂಬ ತಪ್ಪು ಭಾವನೆಯಲ್ಲಿ, ಧರ್ಮ(?)ಕ್ಕಾಗಿ ಪ್ರಾಣ ತೆತ್ತು ಹುತಾತ್ಮರಾಗುತ್ತಿದ್ದೇವೆ ಎಂಬ ಹುಚ್ಚು-ಭ್ರಮೆಯಲ್ಲಿ ಹಿಂಸಾಚಾರಕ್ಕೂ ಇಳಿಯುತ್ತಾರೆ. ಈ ಅಮಾನವೀಯ ಕ್ರೌರ್ಯ-ಹಿಂಸೆಗಳ ಹುಚ್ಚು ಕುಣಿತ ನೋಡಿ ಧರ್ಮ, ಮಾನವೀಯ ದಯೆ (ಪ್ರೇಮ-ಅನುಕಂಪೆಗಳೆ ಆಧಾರವಾಗಿರುವ ಪ್ರತಿಯೊಂದು ಧರ್ಮ) ಕಳಂಕಿತವಾಗಿ ಲಜ್ಜೆಯಿಂದ ಮರೆಗೆ ನಿಲ್ಲುತ್ತದೆ. ಹೀಗೆ ರಕ್ತ ಹರಿಸುವವರ ಧರ್ಮಕ್ಕೆ ಕೆಟ್ಟ ಹೆಸರು ಬರುತ್ತದೆ. ಆ ಧರ್ಮದ ಬಹುಜನ ಒಳ್ಳೆಯವರಿಗೂ ಇದರ ಶಾಖ, ಕೇಡು ತಟ್ಟುತ್ತವೆ.

ಇದು ಒಂದು ದುರಂತವಾದರೆ ಮತ್ತೊಂದು ಅನಿಷ್ಟ, ಧರ್ಮದ ಹೆಸರಿನಲ್ಲಿ ಸ್ವಧರ್ಮೀಯರಿಂದಲೇ ಶೋಷಣೆ. ಧರ್ಮದ ಹೆಸರಿನಲ್ಲಿ , ಜಾತಿಯ ಹೆಸರಿನಲ್ಲಿ ಪ್ರತಿಯೊಂದು ಸಮಾಜದಲ್ಲೂ ಮುಂದುವರಿದವರು ಎಂಬ ಜನ ಸುಲಭವಾಗಿ ನಂಬಿ ಮೋಸ ಹೋಗುವ, ಮುಗ್ಧರಾದ, ಇತರರನ್ನು ಎಲ್ಲ ರೀತಿಯಿಂದಲೂ ನಿರಂತರವಾಗಿ ಶೋಷಿಸುತ್ತಲೇ ಇರುತ್ತಾರೆ. ಜಾತೀಯತೆಯ ಪಿಡುಗು ನಿವಾರಣೆಯಾಗಿ ಆರೋಗ್ಯ ಪೂರ್ಣವಾದ ಹೊಸ ಯುಗ ಆರಂಭವಾಗುವುದಕ್ಕೆ ಕನ್ನಡಿಗರು ವಿಶಾಲವಾದ ಮಾನವೀಯ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಕನ್ನಡಿಗರ ಸಾಂಸ್ಕೃತಿಕ ಪರಂಪರೆಯಲ್ಲೇ ಇದು ಅಂತರ್ಗತವಾಗಿರುವುದರಿಂದ ಅಷ್ಟೇನೂ ಕಷ್ಟಪಡಬೇಕಾದ ಅಗತ್ಯವಿಲ್ಲ. ಶಿವಶರಣರು, ಹರಿದಾಸರು ನಡೆದು ಪಥವನ್ನು ಸಿದ್ಧ ಮಾಡಿಟ್ಟುಬಿಟ್ಟಿದ್ದಾರೆ. ಅದು ವೈಚಾರಿಕವಾದ ಭಕ್ತಿ ಪಥ. ಆಗ ನಮ್ಮ ಪ್ರಾಚೀನ ಮಹಾಕಾವ್ಯಗಳಲ್ಲಿ , ಶಾಸನಗಳಲ್ಲಿ ಪ್ರತಿಪಾದಿತವಾಗಿರುವ ಆದರ್ಶ ಮನೋಧರ್ಮ ನಮ್ಮದಾಗುತ್ತದೆ. ನಮ್ಮ ಹಿರಿಯರು ಕಂಡ ಆದರ್ಶದ ಹೊಂಗನಸು ನನಸಾಗಿ ಎಲ್ಲರ ಬಾಳೂ ಬೆಳಕಾಗಿ ಕನ್ನಡಿಗರ ಮನೋಧರ್ಮ ವಿಶ್ವಕ್ಕೇ ಕೈದೀಪವಾಗುತ್ತದೆ.

## ಬೆಳಕನ್ನು ತನ್ನಿ

ಕೋಣೆ ಕತ್ತಲೆಯಾಗಿದ್ದರೆ, ''ಅಯ್ಯೋ! ಕತ್ತಲೆ, ಕತ್ತಲೆ'' ಎಂದು ಅರಚುತ್ತೀರೇನು? ಬೆಳಕನ್ನು ತರಲು ಇರುವ ಏಕಮಾತ್ರ ಮಾರ್ಗವೆ, ಒಂದು ದೀಪವನ್ನು ಹತ್ತಿಸುವುದು. ಆಗ ಕತ್ತಲೆ ತಕ್ಷಣ ಮಾಯವಾಗುವುದು. ಈಗ ನಿಮಗೆ ಅತೀತವಾದ ಜ್ಯೋತಿಯನ್ನು ತಿಳಿದುಕೊಳ್ಳಲು ಏಕಮಾತ್ರ ಮಾರ್ಗವೇ, ನಿಮ್ಮ ಅಂತರಾಳದಲ್ಲಿರುವ ಆಧ್ಯಾತ್ಮಿಕ ಜ್ಯೋತಿಯನ್ನು ಹಚ್ಚುವುದು. ಆಗ ಪಾಪದ ಮತ್ತು ಅಶುದ್ಧ ಭಾವನೆಯ ಅಂಧಕಾರವೆಲ್ಲ ಮಾಯವಾಗುವುದು. ನಿಮ್ಮ ಉತ್ತಮ ಸ್ವಭಾವವನ್ನು ಕುರಿತು ಯೋಚಿಸಿ, ಕೀಳು ಸ್ವಭಾವವನ್ನು ಕುರಿತು ಯೋಚಿಸಬೇಡಿ.

ಧರ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೊಂದೇ ಮಾರ್ಗ. ಪ್ರತಿಯೊಬ್ಬರೂ ಅದನ್ನು ಕಂಡುಹಿಡಿಯಬೇಕು.. ಈ ಪ್ರಪಂಚದಲ್ಲಿರುವ ವಿಶ್ವಾತ್ಮನೊಂದಿಗೆ ಯಾವುದು ನಮ್ಮನ್ನು ಒಂದುಗೂಡಿಸುವುದೋ ಅದೇ ನಿಜವಾದ ಜ್ಞಾನ.

— ಸ್ವಾಮಿ ವಿವೇಕಾನಂದ